**ದಿನಾಂಕ: 22.03.2025 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎಸ್ ಎಂ ಹೆಚ್ ವಕೀಲರಿಂದಃ**

ನಾನು ಪಿ ಯು ಸಿ ಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು ವ್ಯವಸಾಯ ಮಾಡುತ್ತೇನೆ. ಆರೋಪಿ ಅಡಿಕೆ ಪ್ಲೇಟ್ ತಯಾರು ಮಾಡುವ ಕೆಲಸ ಮಾಡುತ್ತಾರೆ. ನನ್ನ ಹೆಸರಿನಲ್ಲಿ 2 ಎಕರೆ ಅಡಿಕೆ ತೋಟ, ಒಂದೂವರೆ ಎಕರೆ ನಿರಾವರಿ ಜಮೀನು ಹಾಗೂ 3 ರಿಂದ 4 ಎಕರೆ ಬೇರೆಯವರ ಜಮೀನನ್ನು ಲಾವಣಿ ಮಾಡುತ್ತೇವೆ. ನಾನು ಪರಸಪ್ಪ ಎಂಬುವವರ ಜಮೀನನ್ನು ಲಾವಣಿಗೆ ಮಾಡುತ್ತೇನೆ. ಅವರ ಊರು ಮತ್ತು ಅಡ್ಡ ಹೆಸರು ಗೊತ್ತಿಲ್ಲ. ನನಗೆ ಸೇರಿದ ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. ಅದೇ ರೀತಿ ಪರಸಪ್ಪನ ಜಮೀನಿನ ಸರ್ವೆ ನಂಬರ ಗೊತ್ತಿಲ್ಲ. ನನ್ನ ಮತ್ತು ಪರಸಪ್ಪನವರ ಜಮೀನುಗಳ ಉತಾರೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಪರಸಪ್ಪರ ಜಮೀನನ್ನು ಲಾವಣಿ ಪಡೆದ ಬಗ್ಗೆ ಕರಾರು ಪತ್ರ ನನ್ನ ಅಣ್ಣನ ಬಳಿ ಇದೆ ನನ್ನ ತಂದದೆಗೆ ನಾವು ಇಬ್ಬರು ಮಕ್ಕಳು ಇದ್ದೆವೆ. ನಾನು ಮತ್ತು ನನ್ನ ಅಣ್ಣ ಕೂಡಿಯೇ ವಾಸವಾಗಿರುತ್ತೇವೆ. ನಮ್ಮ ಕುಟುಂಬದ ಹಿರಿತನವನ್ನು ನಾನು ಮತ್ತು ನನ್ನ ಅಣ್ಣ ಕೂಡಿಯೇ ಮಾಡುತ್ತೇವೆ. ನನ್ನ ಅಣ್ಣ ಶುಂಠಿ ಬೆಳೆಯುವ ಕೆಲಸ ಮಾಡುತ್ತಾರೆ. ಅವರು ಸಹ ಬೇರೆಯವರ ಜಮೀನನ್ನು ಲಾವಣಿಗೆ ಪಡೆದು ಶುಂಠಿ ಬೆಳೆ ಬೆಳೆಯುತ್ತಾರೆ. ನನ್ನ ಅಣ್ಣ ಬಸವರಾಜ ಮಲ್ಲಿಗಾರ ಎಂಬುವವರ ಜಮೀನನ್ನು ಲಾವಣಿಗೆ ಪಡೆದು ಶುಂಠಿ ಬೆಳೆಯುತ್ತಾರೆ. ಶುಂಠಿ ಬೆಳೆಯಲು ಸಾಕಷ್ಟು ಹಣ ಖರ್ಚಾಗುತ್ತದೆ. 1 ಎಕರೆ ಜಮೀನನ್ನು ಲಾವಣಿಗೆ ಪಡೆದು ಶುಂಠಿ ಬೆಳೆಯಲು ಸುಮಾರು 3 ಲಕ್ಷ ಹಣ ಖರ್ಚಾಗುತ್ತದೆ ಎಂದರೆ ಸರಿ. ಆರೋಪಿ ನನಗೆ 3 ರಿಂದ 4 ವರ್ಷಗಳಿಂದ ಪರಿಚಯಸ್ಥ. ನಾನು ಆ ಅವಧಿಯಲ್ಲಿ ಸುಮಾರು ಸಾಕಷ್ಟು ಹಣವನ್ನು ಕೊಟ್ಟು ಅದನ್ನು ವಾಪಸ್ಸು ಪಡೆದುಕೊಂಡಿರುತ್ತೇನೆ. ನಾನು ಆರೋಪಿಗೆ ನಗದು ರೂಪದಲ್ಲಿಯೇ ಹಣ ಕೊಟ್ಟೆನು. ನಾನು ಕಳೆದ 3 ರಿಂದ 4 ವರ್ಷಗಳಿಂದ ಆರೋಪಿಗೆ ಸುಮಾರು 2 ಲಕ್ಷದಿಂದ 2 ಲಕ್ಷದ 10 ಸಾವಿರದವರೆಗೆ ಹಣ ಕೊಟ್ಟಿರುತ್ತೇನೆ.

2. ನನ್ನ ಸ್ನೇಹಿತ ರವಿ ಎಂಬುವವರ ಮೂಲಕ ಅಡಿಕೆ ಪ್ಲೇಟ್ ಖರೀದಿಸಲು ಹೋ ಸಂದರ್ಭದಲ್ಲಿ ಅಂದರೆ 2020 ರಂದು ಆರೋಪಿಗೆ ನನಗೆ ಪರಿಚಯಸ್ಥ. ನನಗೆ ಆರೋಪಿಯ ಊರಿನಲ್ಲಿ ಆತನನನ್ನು ಹೊರತು ಪಡಿಸಿ ಬೇರೆ ಯಾರು ಸಹ ಪರಿಚಯ ಇರುವುದಿಲ್ಲ. ನಾನು ಅಡಿಕೆ ಪ್ಲೇಟ್ ನ್ನು ಆರೋಪಿಯಿಂದ ಖರೀದಿಸುತ್ತಿದ್ದು ಆ ವವಹಾರ ಅಭಿವೃದ್ದಿಗಾಗಿ ನಾನು ಆರೋಪಿಗೆ ಹಣ ಕೊಟ್ಟೆನು. ನಾನು ಆರೋಪಿಗೆ ದಿನಾಂಕ 25.01.2024 ರಂದು ರೂ.65 ಸಾವಿರ ಹಣ ಕೊಟ್ಟಿರುತ್ತೇನೆ. ಆ ಹಣವನ್ನು 3 ತಿಂಗಳ ನಂತರ ವಾಪಸ್ಸು ಕೊಡುವುದಾಗಿ ಆರೋಪಿ ತಿಳಿಸಿದನು. ಆರೋಪಿ ದಿನಾಂಕ 25.01.2024 ರಂದು ನಮ್ಮ ಮನೆಗೆ ಬಂದು ಹಣ ಕೊಡುವಂತೆ ಕೇಳಿದರು. ಆರೋಪಿ ಈ ಹಿಂದೆ 2 ರಿಂದ 3 ತಿಂಗಳ ಹಿಂದೆ ಹಣ ಕೇಳಿದ್ದು ಆ ದಿನ ಹಣ ಕೊಟ್ಟೆನು. ನಾನು ಅಡಿಕೆ ಫಸಲಿನಿಂದ ಬಂದ ಹಣವನ್ನು ಆರೋಪಿಗೆ ಕೊಟ್ಟೆನು. ನಾನು ಹಣ ಕೊಟ್ಟಾಗ ನನ್ನ ತಾಯಿ, ನನ್ನ ಅಣ್ಣ ಇದ್ದರು. ನಾನು 500 ರೂ. ಮುಖಬೆಲೆಯ ಒಟ್ಟು 130 ನೋಟುಗಳನ್ನು ಆರೋಪಿಗೆ ಕೊಟ್ಟೆನು. ಆರೋಪಿ ಮೇ 2024 ರಂದು ಚೆಕ್ ನಮ್ಮ ಊರರಿನಲ್ಲಿ ನನ್ನ ಸಮಕ್ಷಮ ಸಹಿ ಮಾಡಿ ಕೊಟ್ಟನು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ನಂತರ 1 ತಿಂಗಳ ನಂತರ ದಿನಾಂಕ 26.02.2024 ರಂದು ರೂ.35 ಸಾವಿರವನ್ನು ನಮ್ಮ ಮನೆಯಲ್ಲಿಯೇ ಆರೋಪಿಗೆ ಕೊಟ್ಟೆನು. ಆ ಸಂದರ್ಭದಲ್ಲಿ ನಾನು, ಮತ್ತು ನನ್ನ ಅಣ್ಣ ಮಾತ್ರ ಮನೆಯಲ್ಲಿದ್ದೆವು ಈ ಎರಡು ಹಣಗಳನ್ನು ಕೊಡುತ್ತೇನೆಂದು ತಿಳಿಸಿದರು. ನಾನು ಪುನಃ ಅದೇ ತಿಂಗಳಿನಲ್ಲಿ ರೂ. 65 ಸಾವಿರ ಹಣವನ್ನು ಆರೋಪಿಗೆ ಕೊಟ್ಟೆನು. ಆ ಹಣವನ್ನು ನಾನು ದಾಸನಕೊಪ್ಪ ಗ್ರಾಮದಲ್ಲಿ ಕೊಟ್ಟೆನು. ಈ ಹಣವನ್ನು ಫೆಬ್ರವರಿ–2024 ರಂದು ಕೊಟ್ಟೆನು. ಈ ಹಣವನ್ನು ಸಹ ಆರೋಪಿ ಜನವರಿಯಲ್ಲಿ ಕೇಳಿದ್ದು ನಾನು ಫೆಬ್ರವರಿಯಲ್ಲಿ ಕೊಟ್ಟೆನು. ಆದರೆ ಯಾವ ದಿನಾಂಕ ಕೇಳಿದರು ಎಂಬುದು ನನಗೆ ಗೊತ್ತಿಲ್ಲ. ಈ ಮೂರು ಹಣಗಳಿಗೆ ಸಂಬಂಧಪಟ್ಟಂತೆ ಚೆಕ್ ಗಳನ್ನು ಬೇರೆ ಬೇರೆಯಾಗಿ ಕೊಟ್ಟನು. ಎರಡು ಚೆಕ್ ಗಳನ್ನು ಮೇ–2024 ರಂದು ಮತ್ತು ಒಂದು ಚೆಕ್ ನ್ನು ಜೂನ್–2024 ರಂದು ಕೊಟ್ಟರು. ಆರೋಪಿಗೆ ರ ಮೂರು ಚೆಕ್ ಗಳನ್ನು ಸಹ ನನ್ನ ಮುಂದೆ ಸಹಿ ಮಾಡಿ ಕೊಟ್ಟಿರುತ್ತಾರೆ. ನಿಪಿ–1 ರ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ.

3. ಆ ಚೆಕ್ ನ ಮೇಲಿರುವ ದಿನಾಂಕ ಮತ್ತು ನನ್ನ ಹೆಸರನ್ನು ಮಾತ್ರ ನಾನೇ ಬರೆದಿದ್ದು ಉಳಿದ ಎಲ್ಲಾ ಅಕ್ಷರಗಳನ್ನು ಸಹ ಆರೋಪಿಯೇ ಬರೆದುಕೊಟ್ಟರು. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–1 ರ ಚೆಕ್ ಆರೋಪಿಯ ಖಾತೆಗೆ ಸಂಬಂಧಿಸಿದಲ್ಲ ಎಂದರೆ ನನಗೆ ಗೊತ್ತಿಲ್ಲ. ನಿಪಿ–1 ರ ಚೆಕ್ ಆರೋಪಿಯ ಖಾತೆಗೆ ಸಂಬಂಧಿಸಿದ್ದಲ್ಲ ಎಂಬ ವಿಚಾರ ಈವರೆಗೂ ಸಹ ನನಗೆ ಗೊತ್ತಿರುವುದಿಲ್ಲ. ನಿಪಿ–1 ರ ಚಕ್ ಆರೋಪಿಯದ್ದಲ್ಲ ಎಂಬ ವಿಚಾರ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2020 ರವರೆಗೆ ಆರೋಪಿ ಶಿವಮೊಗ್ಗದಲ್ಲಿಯೇ ವಾಸವಾಗಿದ್ದರು ಎಂದರೆ ಸರಿಯಲ್ಲ.

**(ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಲು ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

Sd/–

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಹಾನಗಲ್

ಸಾಕ್ಷಿಧಾರರ ಸಹಿ